# ಶ್ರೀ ರಾಮ ದೇವರ ಸ್ತುತಿ

## ೨೮೬ (೫೫೭)

ಪತಿತೋದ್ಧರ ರಘುಪತಿಯ ನಾಮಾ(೨೬) ರಾಗ : ಭೂಪ; ತಾಳ : ಕೇಹರವಾ

ಪತಿತೋದ್ಧರ ರಘುಪತಿಯ ನಾಮಾ || ಪ ||

ತುತಿಪರಿಗೆ ಮುಕುತಿಯಾರಾಮಾ || ಅ.ಪ ||

ಕ್ಷಿತಿಜಾಪತಿ ನೀನೇಗತಿಯೆನ್ನುತಾ ।
ಪ್ರತಿಕ್ಷಣಕೂಗಿದ ಮುನಿಸತಿಗಾದಾ ||
ವಾತಸುತಾಹನುಮಂತ ದೇವತಾ ।
ನಿತ್ಯತುತಿಪ ರಘುನಂದನ ನಾಮಾ || ೧ ||

ವಾಣೀಧವಪಿತ ಕೋದಂಡಪಾಣಿ ।
ರಣದೋಳ್ರಾವಣಾಸುರನ ಮಣಿಸಿದಧಣಿ ||
ಯೆಣಿಕೆಗೆ ಸಿಲುಕದಾ ತಪ್ಪೆಣಿಸದೆಪರಿ ।
ಪೂರ್ಣನಾಗಿ ಕ್ಷಣಕ್ಷಣಕೆವದಗುವಾ || ೨ ||

ಜಟಪಕ್ಷಿಗೆ ಕೃಪಕಟಾಕ್ಷ ಬೀರಿದ ।
ಕುಟಿಲ ದೈತ್ಯಕುಲ ಕುಠಾರ ನೆನಿಸಿದ ||
ಘಟಿತಾಘಟಿತಾ ದಿಟಸಂಕಟಹರ ।
ಚಟುಲರೂಪ ಪ್ರಸನ್ವೆಂಕಟನಾಮಾ || ೩ ||

---

ಕೀ.ಕ್ರ.ಸಂ.೨೮೬ ; ಶಬ್ದಾರ್ಥ : (ನು.೧) ಕ್ಷಿತಿಜಾಪತಿ = ರಾಮ; ಪ್ರತಿಕ್ಷಣಕೂಗಿದ ಮುನಿಸತಿಗಾದ = ಅಹಲ್ಯೆಯ ಉದ್ಧಾರ ಪ್ರಸಂಗ

Scanned with CamS

## ಕೋಮಲಾಮಲ ಗಾತ್ರನ ತಾಮರಸದಳ ನೇತ್ರನ[೮,೬]

ರಾಗ : ಸಾರಂಗ;   ತಾಳ : ಅಟ್ಟ

ಕೋಮಲಾಮಲ ಗಾತ್ರನ ತಾಮರಸದಳ ನೇತ್ರನ
ಸ್ವಾಮಿ ಸಿರಿನಿವಾಸನ ಕಂಡೆ ಹೇಮಗಿರಿ ವರದೀಶನ || ಪ. ||

ಕನ್ನೆ ಲಕುಮಿಯನೆತ್ತಿದ ಶುಭ ಚಿನ್ನವಕ್ಕಿಯ ಹತ್ತಿದ
ರನ್ನದುಡುಗೆಗಳಿಟ್ಟನ ಸುವರ್ಣದಂಬರನುಟ್ಟನ
ಕರ್ಣಕುಂಡಲ ಬೆಳಗಿನ ನುಣ್ಣೆಗ್ನೆಲ್ಲ್ಯಲುಗುವ ಕುರುಳಿನ
ಸಣ್ಣನಾಮದ ನೊಸಲಿನ ಶ್ರೀ ಚಿನ್ಮಯನ ಬಲು ಚೆಲುವನ || ೧ ||

ಕುಂದ ಕುಟ್ಮಲ ಮಾಲೆಯ ಪ್ರಭೆಗುಂದದ ಮಕುಟಮೌಳಿಯ
ಸ್ಕಂದನಾಂಗದರಾಭಯವರ ಹೊಂದಿದಮಲ ಸುಪಾಣಿಯ
ಮುಂದೆ ನಾರದ ಹನುಮರ ಗಾಯನಾನಂದದಲಿ ತಾ ಕೇಳುವ
ಒಂದೆಡಬಲದಿ ಛತ್ರವ ಪಿಡಿದಿಂದಿರೆಯರೊಳೊಪ್ಪುವ || ೨ ||

ಕೋರ ಮುತ್ತಿನ ಹಾರದ ಕೇಯೂರ ಕೌಸ್ತುಭ ವೃಕ್ಷದ
ಚಾರುಸ್ಮಿತ ಮುಖರೋಚೆಯ ದಯಾವಾರಿಧಿಯ ಮಹೋದಾರಿಯ
ಸಾರಿದರ ಸುರತರುವಿನ ಸುರವೈರಿ ಕರಿ ಪಂಚಾನನ
ಭೂರಿ ಪ್ರಸನ್ವೆಂಕಟೇಶನ ಹೃದಯಾರವಿಂದ ನಿವಾಸನ || ೩ ||

---

ಕೀ.ಕ್ರ.ಸಂ.೯೬, ಶಬ್ದಾರ್ಥ : ''ಹಲವು ಕಾಲವು....ಅಹಲ್ಯೆ'' (ನು.೨) = ಇದು ರಾಮಾಯಣದ ಬಾಲಕಾಂಡದಲ್ಲಿ ಬರುವ ಅಹಲ್ಯೋದರ ಪ್ರಸಂಗ.

ಕೀ.ಕ್ರ.ಸಂ.೯೭, ಶಬ್ದಾರ್ಥ : ಕೋಮಲಾಮಲ = ಕೋಮಲ + ಅಮಲ; ಅಮಲ = ಶುಭ್ರ; ಕುಂದ = ಕೋಲು ಮಲ್ಲಿಗೆ; ಕುಟ್ಮಲ = ಅರೆಬಿರಿದ ಮೊಗ್ಗು

Scanned with CamS

**ಮಾಧವ ಜಯ ಜಯ, ಶ್ರೀ ಧವ ಜಯ ಜಯ** (೧೦, ೧೨) ರಾಗ : ತಾಳ :

ಮಾಧವ ಜಯ ಜಯ ಶ್ರೀಧವ ಜಯ ಜಯ
ಯಾದವ ಕುಲಮಣಿ ಭೂದೇವಿ ಪ್ರೀಯ ॥ ಪ ॥

ವಿದ್ಯಾಧರ ಮುನಿ ಸದ್ಯೋಜಾತ ವಿರಿಂ –
ಚಾದ್ಯಾತೀತ ವೇದವೇದ್ಯ ಮುಕುಂದಾ
ಸ್ವರ್ಣ ಗೀರೀಶ ಸುಪರ್ಣಾ ವಾಹನ ವಿಶ್ವ
ನಿರ್ಣಯ ಶೀಲ ದಯಾರ್ಣವ ಪೂರ್ಣಾ ॥ ೧ ॥

ಪುಣ್ಯ ಪುರುಷ, ವರೇಣ್ಯ ದನುಜರಾ –
ರಣ್ಯಪಾವಕ ದೋಷಶೂನ್ಯ ಗುಣಾಂಕಾ ॥ ೨ ॥

Scanned with CamS

ಕಠಿಣ ದಂಡಕ ದೇಶಾಟಣ ಪ್ಲವಂಗ ಸಂ –
ಘಟಣಾಹಿ ಫಣ ನಟ ನಟನ ಶ್ರೀಮೂರ್ತೆ ॥ ೪ ॥

ಕಿಂಕರ ರಕ್ಷಕ ನಿಶ್ಯಂಕ ಸದಾಸುರ
ಸಂಕಟ ಹರ ಪ್ರಸನ್ವೇಂಕಟ ಪ್ರಭುವೆ ॥ ೫ ॥

Scanned with CamS

## ೧೭೮

**ಪಕ್ಕಿಯ ಹೆಗಲೇರಿ ಬಂದವಗೆ** (೧೦, ೧೩;೧೮)

ರಾಗ : ಕನ್ನಡಕಾಂಬೋದಿ; ತಾಳ : ಆದಿ

ಪಕ್ಕಿಯ ಹೆಗಲೇರಿ ಬಂದವಗೆ ನೋ
ಡಕ್ಕ ಮನಸೋತೆ ನಾನವಗೆ ॥ ಪ ॥

ಸತ್ರಾಜಿತನ ಮಗಳೆತ್ತಿದ ಊ
ನ್ಮತ್ತ ನರಕನೊಳು ಕಾದಿದ
ಮತ್ತೆ ಕೆಡಹಿದ ಅವನಂಗವ
ಸತಿಗಿತ್ತನು ತಾ ಆಲಿಂಗನವ ॥ ೧ ॥

ಹದಿನಾರು ಸಾವಿರ ನಾರಿಯರ ಸೆರೆ
ಮುದದಿಂದ ಬಿಡಿಸಿ ಮನೋಹರ
ಅದಿತಿಯ ಕುಂಡಲ ಕಳಸಿದಾ ಹರ
ವಿಧಿಸುರ ನೃಪರನು ಸಲಹಿದ ॥ ೨ ॥

ಉತ್ತಮ ಪ್ರಾಗ್ಜ್ಯೋತಿಷ ಪುರವ ಭಗ
ದತ್ತಗೆ ಕೊಟ್ಟ ವರಾಭಯವ
ಕರ್ತ ಕೃಷ್ಣಯ್ಯನ ನಂಬಿದೆ ಶ್ರೀ –
ಮೂರ್ತಿಯ ಪಾದವ ಹೊಂದಿದೆ ॥ ೩ ॥

ನರಕ ಚತುರ್ದಶಿ ಪರ್ವದ ದಿವ
ಹರುಷಾದಿ ಪ್ರಕಟಾದನು ದೇವ
ಶರಣಾಗತಜನ ವತ್ಸಲ ರಂಗ
ಪರಮ ಭಾಗವತರ ಪ್ರತಿಪಾಲಾ ॥ ೪ ॥

ಹೊಗಳಿ ಕೃಷ್ಣಯ್ಯನ ಮಹಿಮೆಯ ಮುಕ್ತಿ -
ನಗರದ ಅರಸನ ಕೀರ್ತಿಯ
ಜಗದೀಶ ಪ್ರಸನ್ವೆಂಕಟೇಶನ ಭಕ್ತ
ರಘಹಾರಿ ರವಿಕೋಟಿ ಪ್ರಕಾಶನ ॥ ೫ ॥

Scanned with CamS

# ೯. ಕರವಮುಗಿದು ಕರೆದವರ ಮನೆಗೆ

ರಾಗ – ಮೇಘಮಲ್ಹಾರ ತಾಲ – ತ್ರಿತಾಲ/ದಾದರಾ

ಕರವಮುಗಿದು ಕರೆದವರ ಮನೆಗೆ ।
ಬರಲಾರೆಯೆ ಮುಕುಂದ ಪ್ರೀಯೆ ॥ಪ॥

ಪರಿಪರಿ ಕೂಗಿದರರಘಳಿಗೆಯೂಕಃ ।
ತರಳನ ಮ್ಯಾಲೇಕೆ ಕರುಣಬಾರದೆ ॥ಅ.ಪ॥

ದುರುಳ ಹಿರಣ್ಯನ ಕರುಳನ್ಹರಿಯಲು ।
ಅರಮನೆ ಕಂಬವನ್ಹರಿದು ಬಂದಾಗ ॥
ಸುರಾಸುರರೆಲ್ಲ ಹೆದರುತ ಮೊರೆಯಿಡೆ ।
ಹರಿತೊಡೆಯನೇರಿ ಪೊರೆದವಳಲ್ಲವೆ ॥೧॥

ಸುರಚಿರ ಹಿಮಕರಣ ತೇಜಸ್ಫುರಣಶ್ರೀ ।
ಹರಿಚರಣ ಪಂಕೇರುಹಯುಗಳ ಶ್ರೇಣಿ ॥
ಆರುನಾಲಕು ತತ್ವಕಭಿಮಾನಿ ಸಂಪನ್ನೆ ।
ದೂರಿರದೆ ನೋಡೀಕಡೆ ಅಂಬುಜಪಾಣಿ ॥೨॥

ಸರಸಿಜೋದ್ಭವ ಜನನಿ ವರಸುಜನಾವಳಿ ಪಾಲನಿ ।
ಹರನ ಕಪಾಲವ ಭರಿಸಿದ ಅನ್ನಪೂರಣೆ ॥
ಧರೆಗಧಿಕ ಕರವೀರಪುರ ನೆಲೆವಾಸಿನಿ ।
ಸಿರಿ ಪ್ರಸನ್ವೆಂಕಟರಮಣನ್ನರಮಣಿ ॥೩॥

Scanned with CamS

# ೨೬. ಒಲ್ಲೆಯೇನಮ್ಮಾ ನಿನ ನಲ್ಲನೊಡನೆ ಕೂಡಿ

ರಾಗ – ಮ. ಸಾರಂಗ

ತಾಲ – ಕೇಹರವಾ

ಒಲ್ಲೆಯೇನಮ್ಮಾ ನಿನ ನಲ್ಲನೊಡನೆ ಕೂಡಿ ಇರ–
ಲೊಲ್ಲೆಯೇಕಮ್ಮಾ ಲಕುಮೆಮ್ಮಾ ||ಪ||

ಪರಮ ಮಂಗಳೆ ನೀನು ಪರನಾರೇರಿಗೆ ।
ದಾರಿ ತೋರುವಳಲ್ಲವೇನು ನೀನು ॥
ಸುರಮುನಿ ಮೇಲಿನ ಕೋಪದಿಂದ ಶ್ರೀ ।
ಹರಿಯ ತೊರೆದುದು ವುಚಿತವೇನು ||೧||

ಮುಕುತಾ ಮುಕುತಳಲ್ಲವೆ ನೀ ಹರಿಯ ।
ಲೋಕ ಕಾರ್ಯವ ಬಲ್ಲವಳಲ್ಲವೆ ನೀನು ॥
ನಾಕವ ತೊರೆದರೆ ಶ್ರೀಕಾಂತಗೆ ನೀ ।
ಬೇಕೇ ಬೇಕು ಕೇಳೀ ವಾಕು ||೨||

ಜಲಚರ ವೇಷ ತೊಟ್ಟಾ ಹರಿಯು ।
ಕೋಲರೂಪೂ ಧರಿಸಿದನೆಂದು ॥
ಮಾಲೋಲ ಪ್ರಸನ್ವೆಂಕಟರಾಯನ್ನ ।
ಮ್ಯಾಲೇತಕೆ ಈ ಮುನಿಸು ತಾಯೆ ||೩||

---

ಕಠಿಣ ಶಬ್ದಾರ್ಥ: ನಾಕ = ಸ್ವರ್ಗ; ವಾಕು = ಮಾತು

– ಪ್ರಧಾನ ಸಂಪಾದಕರು

Scanned with CamS

# ೭. ಬಾರೇ ಭಾಗ್ಯದರಸಿ ಭವದಘ ಹರಿಸಿ

ರಾಗ – ದರ್ಬಾರಿಕಾನಡಾ　　　　ತಾಲ – ತ್ರಿತಾಲ

ಬಾರೇ ಭಾಗ್ಯದರಸಿ । ಭವದಘ ಹರಿಸಿ ।
ಹರಸು ಬಾ ಹರಿಚರಣ ತೋರಿಸಿ ॥ಪ

ಜಾಂಬೂನದಾಂಬರದೋಳ್ಪೊಳೆವಂಭ್ರಣಿ ।
ಶಂಭೋ ಸುರರಿಂಬಿಡುವ ಸಂಭ್ರಮಿ ॥
ಅಂಬುಜ ಸಂಭವ ಪೊಂಬನ ಜನನಿ ।
ಇಂಬುದೋರು ಕುಂಬಿಣಿಜಾಮಣಿ ॥೧

ಮನ್ಮಥ ಜನಕನನ್ಯ ಭಜಿಪಗುಣ ।
ಸನ್ನುತ ರೂಪ ಕೊಂಡಾಡಿ ಪಾಡುವಗೆ ॥
ಹೃನ್ಮನದೋಳಿಹ ಬಿಂಬಮೂರ್ತಿಯಾ ।
ಕಣ್ಮನ ಸೆಳೆವಂತೆ ತೋರಿ ಪೊರೆಯೆಯಾ ॥೨॥

ದಯವಾರುಧಿ ಭವ ಭಯ ದೂರಿರಿಸಲು ।
ದಯ ಮಾಡಿಸೆ ಈ ಕ್ಷಣ ವೊಲ್ಲೆನ್ನದೆ ॥
ಕಾಯಜ ಪಿತ ಪ್ರಸನ್ವೆಂಕಟರಾಯನ ।
ಜಾಯೆ ಜಗದಭಿಮಾನಿಯೆ ತಾಯೆ ॥೩॥

---

ಕಠಿಣ ಶಬ್ದಾರ್ಥ: ಅಂಭ್ರಣಿ = ಪ್ರಳಯೋದಕ ರೂಪಿಯಾದ ದುರ್ಗಾದೇವಿ
ಕಂಬಿಣಿಜಾಮಣಿ = ಸಮುದ್ರದಲ್ಲಿ ಹುಟ್ಟಿದ ಮಣಿ ಶ್ರೇಷ್ಠಳು

– ಪ್ರಧಾನ ಸಂಪಾದಕರು

Scanned with CamS

## ೧೪. ಸಗರರಾಜತನಯಾ ಕಾಯೆಯಾ

ರಾಗ – ದುರ್ಗಾ ತಾಲ – ತ್ರಿತಾಲ

ಸಗರರಾಜತನಯಾ ಕಾಯೆಯಾ ||ಪ||

ಅಗಣಿತ ಗುಣಾನಂದ ಸುದಯಾ ||ಅ.ಪ.||

ಭಾಗ್ಯದರಸಿ ನಿನ್ನ ಬಗೆ ಬಗೆ ಪೂಜಿಸಿ ।
ಪೊಗಳಲು ಗುಣನಾಮಂಗಳ ಸ್ಮರಿಸಿ ॥
ಬೇಗದಿ ಬಂದು ಸಲಹುವಳೆಂದು ।
ಆಗಮ ಸಾರಿದ ಕೇಳಿ ಬಂದೆನೆ ||೧||

ವಿಗತದೋಷ ಹರಿಯಗಲಿರದೆ ಸದಾ ।
ಜಗಕಾರ್ಯದೊಳ್ಜತೆಗೂಡಿ ವಿರಮಿಸುವಿ ॥
ಭಾಗವತರ ಭವರೋಗಗಳಳಿಸಿ ತವ ।
ಭಾಗೀರಥಿ ಪಿತನ ಮೊಗ ತೋರುವಳೆ ||೨||

ಸ್ವಗತಾನನ ತವ ಸ್ವಯಂಶಕ್ತಿ ಘನ ।
ಸ್ವರ್ಗಾಪವರ್ಗಾದಿ ಭೂಸುರ ಪಾಲನ ॥
ತ್ರಿಗುಣಧಾಮ ಪ್ರಸನ್ವೆಂಕಟರಾಯನ ।
ಈಗ ತೋರಿ ಪೊರೆ ಜಗದಘಹರಳೆ ||೩||

# ಶ್ರೀಶೈಲ ಮಲ್ಲಿಕಾರ್ಜುನ ಸ್ತುತಿ

## ೨೭೭ (೫೪೮)

ಪಾಲಿಸೋ ಪಾರ್ವತಿ ರಮಣಾ(೨೭)

ರಾಗ : ಭೀಮಪಲಾಸ; ತಾಳ : ತ್ರಿಕಾಲ

ಪಾಲಿಸೋ ಪಾರ್ವತಿರಮಣಾ ॥ ಪ ॥

ಮಲ್ಲಿಕಾರ್ಜುನ ಶ್ರೀಶೈಲ ಸದನಾ ।
ಪುಲ್ಲನಾಭ ಹರಿಕಥಾ ಬೋದನಾ ॥ ಅ.ಪ ॥

ಫಾಲನಯನ ಶುಂಡಾಲ ಚರ್ಮಧರ ।
ಹಾಲಾಹಾಲವನು ಪಾನಗೈದಹರ ॥
ಮಾಲೋಲೆಯ ಕರಕಪಾಲ ತುಂಬಲು ।
ವಾಲೋಗರದೊಳ್ ಭಜಕರ ಸಲುಹಿದಿ ॥ ೧ ॥

ನಂದಿಗಮನ ಬಲು ಸುಂದರಿ ಸಂಗನಾ ।
ವಂದಿತ ಮನಕಾನಂದ ದಾತಘನ ।

---

ಕೀ.ಕ್ರ.ಸಂ.೨೭೬ ; ಶಬ್ದಾರ್ಥ : (ನು.೩) ವಾಂಛಿತತಾಂವರ = ಬಯಸಿದ್ದನ್ನು ಕೊಡುವರ
ಕೀ.ಕ್ರ.ಸಂ.೨೭೭ ; ಶಬ್ದಾರ್ಥ : (ನು.೧) ವಾಲೋಗರದೊಳು = ಭುವಿಯೊಳು

Scanned with CamS

ಬಂದೆ ನಂಬಿ ಗುರುವೆನ್ನುತ ನಿನ್ನ ।
ಇಂದೆನಗೆ ದಯ ಮಾಡು ಮುನಿಮನಾ ॥ ೨ ॥

ಕರ್ಪುರ ಗೌರವದಂಗ ಚಂದ್ರಶಿರ ।
ಸರ್ಪಭೂಷಣ ಶಿವ ಅಂಗಜಮರ್ದನ ॥
ಅರ್ಪಿಸಿಕೊಂಬಾಭಕುತರಿಗೊಲಿವಾ ।
ಸರ್ಪಶಯನ ಪ್ರಸನ್ವೆಂಕಟ ಪ್ರೀಯಾ ॥ ೩ ॥

Scanned with CamS

## ಸಲಹು ಸಲಹು ನನ್ನಯ್ಯನೆ (೧೦)

ರಾಗ : ಕನಕ ಕಾಂಬೋದಿ ತಾಳ : ತ್ರಿವಿಡಿ

ಸಲಹು ಸಲಹು ನನ್ನಯ್ಯನೆ
ಸಲಹು ಸಲಹು ॥ ಪ ॥

ಶ್ರೀಗಿರಿವಾಸ ನಾಗವಿಭೂಷ
ಯೋಗಿಜನೇಶಾಘೌಘವಿನಾಶ ॥ ೧ ॥

ಗಜದ ಸುಚ್ಛೈಲಿ ಅಜನ ಕಪಾಲಿ
ದ್ವಿಜ ಮೌಳಿ ಅಂಗಜಹರ ಶೂಲಿ ॥ ೨ ॥

ಸ್ಫಟಿಕ ಸುಗಾತ್ರ ಪಟೂಜ್ವಲ ನೇತ್ರ
ಕುಟಿಲ ಪ್ರಸನ್ವೆಂಕಟಪತಿ ಪೌತ್ರ ॥ ೩ ॥

Scanned with CamS

# ಶ್ರೀಪುರಂದರ ದಾಸರು (೧೦)

## ೯

**ತಂದೆ ಪುರಂದರದಾಸರ ಸ್ಮರಿಸುವೆ** ರಾಗ–ಶಂಕರಾಭರಣ (ಯಮನ); ತಾಳ : ಆಟ (ದೀಪಚಂದಿ)

ತಂದೆ ಪುರಂದರದಾಸರ ಸ್ಮರಿಸುವೆ ಎನ್ನ
ಮಂದಮತಿಗಳೆದು ಹರಿಭಟನೆನಿಸುವೆ ॥ ಪ ॥

ಗುರು ವ್ಯಾಸರಾಜರ ಚರಣಾಬ್ಜ ಷಟ್ಚರಣನ
ವಿರಕುತಿ ಭಕುತಿ ಜ್ಞಾನಾರ್ಣವನ
ವರ ಉಪನಿಷದ್ವಾರಿನಿಧಿಗೆ ತಿಮಿಂಗಿಲನಹನ
ಧರೆಯ ಕವಿಕುಲ ಶಿಖಾಮಣಿಯೆನಿಪನ ॥ ೧ ॥

ದಿನ ದಿನ ಯದೃಚ್ಛಾರ್ಥಲಾಭದಲಿ ತುಷ್ಟನ
ಕನಕಲೋಷ್ಠ ಸಮಾನದೀಕ್ಷಿಸುವನ
ಘನ ಸಿದ್ಧಿಗಳು ತಾವೆ ಬರಲೊಡಂಬಡದನ ಹರಿ
ಗುಣ ಕೀರ್ತನೆಯಲ್ಲಿ ಪರವಶದಿಹನ ॥ ೨ ॥

ಭವಜಲಧಿ ಗೋಷ್ಪದಕೆ ಸರಿದಾಟಿ ಕಾಮ ಕ್ರೋ
ಧವ ಮೆಟ್ಟಿ ಭಕ್ತಿಸುಧೆಯುಂಡು ತೇಗಿ
ಭುವಿಯಲ್ಲಿ ನಿಜಕೀರ್ತಿಯನು ಹರಹಿ ಪವನಮತ
ದವರೆನಿಪ ದಾಸರಿಗೆ ತವರೂಪ ತೋರಿದನ ॥ ೩ ॥

Scanned with CamS

ಕವನೋಕ್ತಿ ಮಳೆಗರೆದು ಹರಿದಾಸ ಪೈರ್ಗಳಿಗೆ
ಅವಿರಳಾನಂದವಿತ್ತರ್ಥಿಸುವನ
ನವಭಕುತಿ ಮನಗಂಡು ಸವೆಯದಾನಂದಪುರ ಪ
ಥವನು ತೋರಿಸಿದಂಥ ಬಹುಕೃಪಾಕರನ ॥ ೪ ॥

ಗೀತ ತಾಯಿ ಸುಳಾದ್ಯುಗಾಭೋಗ ಪದ್ಯಪದ
ವ್ರಾತ ಪ್ರಬಂಧ ರಚಿಸಿ ವಿಠಲನ
ಪ್ರೀತಿ ಬಡಿಸಿ ಕಂಡು ನಲಿವ ವೈಷ್ಣವಾಗ್ರ
ನಾಥ ಪ್ರಸನ್ವೇಂಕಟ ಕೃಷ್ಣಪ್ರಿಯನ ॥ ೫ ॥

Scanned with CamS

## ಪ್ರಸನ್ನ ವೆಂಕಟದಾಸರೇ ಪರಿಪಾಲಿಸೆನ್ನನು ಪ್ರಾರ್ಥಿಪೆ [೪]

ಪ್ರಸನ್ನ ವೇಂಕಟದಾಸರೇ । ಪರಿ ಪಾಲಿಸೆನ್ನನು ಪ್ರಾರ್ಥಿಪೆ ॥ ಪಲ್ಲ ॥
ಬನ್ನಬಟ್ಟೆನೋ ಘನ್ನಮಹಿಮನೆ
ಇನ್ನು ಕರುಣಿಸೋ ಸತ್ಕೃಪೆ ॥ ಅನು. ಪಲ್ಲ ॥

ಅಸನವಸನದಿ ವನಿತೆ ವ್ಯಸನದಿ
ಬಿಸಜನಾಭನ ನೆನೆಯದೆ ।
ಮೋಸಹೋದೆನೋ ಘಾಸಿಯಾದೆನೋ
ಲೇಸೆಣಿಸಿ ನಿಮ್ಮಡಿ ಸಾರಿದೆ ॥ ॥ ೧ ॥

ತಕ್ರಬೇಡಲು ವಕ್ರಮಾತಿಗೆ
ಕ್ಷಿಪ್ರದಲಿ ಗೃಹ ತ್ಯಜಿಸಿದೆ
ನಕ್ರಹರ ಅಕ್ರೂರವರದಶ್ರೀ
ಚಕ್ರಿ ಅರಸುತ ಚರಿಸಿದೆ ॥ ೨ ॥

ಮಣಿಸಿ ಹಣಿಸುವ ಜಗವಕುಣಿಸುವ ।
ಕುಣಿಸುವನ ನೀ ತಣಿಸಿದೆ ।
ಕೃಷ್ಣ ಕಥನವ ಮನನ ಮಥನವ ।
ಗಂಧರ್ವ ಗಾನದಿ ಉಣಿಸಿದೆ ॥ ೩ ॥

ಚಂದ್ರಸಾವಿರ ದರ್ಶನ ವರ
ವರ್ಷ ಋತು ಹರಿದಾಸರ ।
ಸಾಂದ್ರಗುರು ಹರಿಪದವ ಸ್ಮರಿಸುತ ।
ಹರಿಪುರದಿ ನಿಜವಾಸರ ॥ ॥ ೪ ॥

ಮಂದ ಭಾಗ್ಯನು ಬಂದು ನಿಂದಿಹೆ ।
ದ್ವಂದ್ವ ಪದಕಭಿವಂದನ ।
"ಇಂದಿರಾಪತಿ ವಿಠಲ"ನ ಪ್ರಿಯ –
ಬಿಡಿಸೋ ಜನುಮದ ಬಂಧನ ॥ ॥ ೫ ॥



Scanned with CamS

## ೨೫೩

## ಮಂಗಳ ಮಂಗಳಾತ್ಮಕಗೆ ಮಂಗಳ ಮಂಗಳಾನನಗೆ (೧೦)

ರಾಗ : ತಾಳ :

ಮಂಗಳ ಮಂಗಳಾತ್ಮಕಗೆ ಮಂಗಳ ಮಂಗಳಾನನಗೆ
ಮಂಗಳ ಮಂಗಳದೇವಿಯರಸಗೆ ॥ ಪ ॥

ಮಿಸುನಿಯ ಹರಿವಾಣದಲ್ಲಿ ಹೊಸಮುತ್ತಿನಾರತಿ ನಿಲಿಸಿ
ಬಿಸಜಗಂಧಿಯರು ಶ್ರೀಹರಿಗೆ ಜಯವೆನ್ನಿ ॥ ೧ ॥

ಕುಂದಕುಟ್ಮಲರದನೆಯರು ಇಂದುಮಂಡಲವದನೆಯರು
ಸಿಂಧುಶಯನ ನಿತ್ಯನಿಗೆ ಜಯವೆನ್ನಿ ॥ ೨ ॥

ರಂಭಾಸ್ತಂಭೋರು ಅಂಬುಜಕುಚಯುಗಳೆಯರು
ಅಂಬುಜಶರಜನಕಗೆ ಜಯವೆನ್ನಿ ॥ ೩ ॥

ಪ್ರಾಗ್ಜ್ಯೋತಿಷಧಿಪನರಿಗೆ ಪೂಗಣ್ಣಿಯ ಮನೋಹರಗೆ
ನಾಗ್ಗನ್ನೆಯರ ದೇವಗೆ ಜಯವೆನ್ನಿ ॥ ೪ ॥

ಸೌಂದರ್ಯಾತಿಶಯ ಪೂರಣಗೆ ಸೈಂಧವ ಹನನ ಕಾರಣಗೆ
ತಂದೆ ಪ್ರಸನ್ನವೆಂಕಟೇಶಗೆ ಜಯವೆನ್ನಿ ॥ ೫ ॥

Scanned with CamS